ಇ) ಈ ನೌಕರರಿಗೆ ತಿಂಗಳೊಂದಕ್ಕೆ ವೇತನ ಮತ್ತು ಹೆಚ್ಚುವರಿ ಭತ್ಯೆಯಾಗಿ ಯಾವುದೇ ಐ.ಎ.ಎಸ್. ಅಧಿಕಾರಿಗಳಿಗಿಂತ ಕಡಿಮೆ ಇಲ್ಲದಷ್ಟು ಸಂಬಳ ನೀಡುತ್ತಿರುವುದು ನಿಜವೇ;

ಈ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿದ್ದು ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಉ) ಈ ಮುದ್ರಣಾಲಯದ ನಿರ್ದೇಶಕರು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವನ್ನು ನಡೆಸುತ್ತಿದ್ದು, ಇವರನ್ನು ಕೆಲಸದಿಂದ ವಜಾಗೊಳಿಸಿ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಾಬುರಾವ್ ಚವ್ಹಾಣ್(ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಸಂಖ್ಯೆ : 8. ಈ ಮುದ್ರಣಾಲಯಗಳಲ್ಲಿ ಖಾಯಂ ಔದ್ಯೋಗಿಕ ನೌಕರರ ಸಂಖ್ಯೆ: 1284. ಗುತ್ತಿಗೆ ಆಧಾರದ ಮೇಲೆ ಯಾರನ್ನು ನೇಮಕ ಮಾಡಿಕೊಂಡಿರುವುದಿಲ್ಲ.

ಆ) ಬಂದಿರುವುದಿಲ್ಲ

ಇ) ನೌಕರರುಗಳಿಗೆ ನಿಯಮಾನುಸಾರ ವೇತನ ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಹೆಚ್ಚುವರಿ ಭತ್ಯೆಗಳನ್ನು ಕಾರ್ಖಾನೆಗಳ ಸಂಹಿತೆ ಮೇರೆಗೆ ನೀಡಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ತುಮಕೂರು, ಕೋಲಾರ, ಮಂಗಳೂರಿನ ಸರ್ಕಾರಿ ಮುದ್ರಣಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು

2027(2546) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು, ಕೋಲಾರ, ಮಂಗಳೂರಿನ ಮುದ್ರಣಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಇವರುಗಳಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ನೌಕರರ ಸಂಖ್ಯೆ ಎಷ್ಟು;

ಇ) ಇಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಪ್ರತಿ ತಿಂಗಳು ಐ.ಎ.ಎಸ್. ಅಧಿಕಾರಿಗಳಿಗಿಂತ ಹೆಚ್ಚಿನ ಸಂಬಳವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ಹಾನಿಯಾಗುತ್ತಿರುವುದು ನಿಜವೇ;

ಉ) ಹೀಗೆ ಪ್ರತಿಯೊಂದು ಜಿಲ್ಲೆಗಳಲ್ಲಿ ಮುದ್ರಣಾಲಯಗಳನ್ನು ಸ್ಥಾಪನೆ ಮಾಡುತ್ತಿರುವುದರಿಂದ ಕೋಟ್ಯಾಂತರ ರೂಪಾಯಿಗಳ ಹಣ ಅಪವ್ಯಯವಾಗುತ್ತಿಲ್ಲವೇ;

ಊ) ಇಷ್ಟೊಂದು ಮುದ್ರಣಾಲಯಗಳನ್ನು ಸ್ಥಾಪಿಸಿದರೂ ಮುದ್ರಣ ಕಾರ್ಯವನ್ನು ಖಾಸಗಿ ಮುದ್ರಣಾಲಯಗಳಿಗೆ ವಹಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಕಾರಣವೇನು;

ಋ) ಕಳೆದ 3 ವರ್ಷಗಳಿಂದ ಖಾಸಗಿ ಮುದ್ರಣಾಲಯಗಳಿಗೆ ಎಷ್ಟು ಮೊತ್ತದ ಯಾವ ಯಾವ ಮುದ್ರಣ ಕಾರ್ಯಗಳನ್ನು ವಹಿಸಿಕೊಡಲಾಗಿದೆ; ಇದಕ್ಕೆ ನೀಡಲಾಗಿರುವ ಹಣ ಎಷ್ಟು?(ವಿವರ ನೀಡುವುದು)?

ಶ್ರೀ ಬಾಬುರಾವ್ ಚವ್ಹಾಣ್(ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ತುಮಕೂರು, ಕೋಲಾರ, ಮಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಔದ್ಯೋಗಿಕ ನೌಕರರುಗಳ ಸಂಖ್ಯೆ ಕ್ರಮವಾಗಿ 67, 18 ಮತ್ತು 22.

ಆ) ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದಿಲ್ಲ.

ಖಾಯಂ = 107

ಗುತ್ತಿಗೆ = ಇಲ್ಲ.

ಇ) ಬಂದಿರುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಜಿಲ್ಲಾ ಮುದ್ರಣಾಲಯಗಳ ಸ್ಥಾಪನೆಗೆ ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲು ಸರ್ಕಾರಿ ಕೇಂದ್ರ ಮುದ್ರಣಾಲಯದ ಹುದ್ದೆಗಳನ್ನು ಸ್ಥಳಾಂತರಿಸಿ ನೌಕರರುಗಳನ್ನು ಜಿಲ್ಲಾ ಮುದ್ರಣಾಲಯಗಳಿಗೆ ಮರುವಿಂಗಡಣೆ ಮಾಡುವ ಮೂಲಕ ಜಿಲ್ಲಾಡಳಿತಕ್ಕೆ ಅನುಕೂಲವಾಗುವಂತೆ ಜಿಲ್ಲಾ ಮುದ್ರಣಾಲಯಗಳನ್ನು ಸ್ಥಾಪಿಸಲಾಗುತ್ತಿದೆ.

ಊ) ಸರ್ಕಾರಿ ಮುದ್ರಣಾಲಯಗಳಲ್ಲಿ ನಾಲ್ಕು ವರ್ಣದ ಮುದ್ರಣ ಯಂತ್ರಗಳು, ಸ್ಕ್ಯಾನರ್, ಲ್ಯಾಮಿನೇಟಿಂಗ್, ಸ್ಪಾಟ್ ಎಂಬೋಸಿಂಗ್, ಇತ್ಯಾದಿ ಸೌಲಭ್ಯಗಳು ಲಭ್ಯವಿಲ್ಲದ ಕಾರಣ ಈ ತರಹದ ಕೆಲವೇ ಕೆಲಸಗಳನ್ನು ಮಾತ್ರ ಖಾಸಗಿ ಮುದ್ರಣಾಲಯಗಳಿಗೆ ವಹಿಸುವ ಅನಿವಾರ್ಯತೆ ಇರುತ್ತದೆ.

ಋ) ಅನಿವಾರ್ಯ, ಸಂದರ್ಭಗಳಲ್ಲಿ ಬಹುವರ್ಣದ ಮುಖಪುಟಗಳು, ಲ್ಯಾಮಿನೇಟಿಂಗ್, ಸ್ಕ್ಯಾನಿಂಗ್ ಇತ್ಯಾದಿ ಕೆಲಸಗಳನ್ನು ಮಾತ್ರ ಸರ್ಕಾರದ ಅನುಮೋದಿತ ದರಗಳಲ್ಲಿ ಸರ್ಕಾರದ ಅಂಗೀಕೃತ ಖಾಸಗಿ ಮುದ್ರಣಾಲಯಗಳಿಗೆ ವಹಿಸಿ ನಿರ್ವಹಿಸಿಕೊಳ್ಳಲಾಗಿರುತ್ತದೆ. ಈ ಬಾಬ್ತು ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ಹಣ 2000-01ರಲ್ಲಿ 30.33 ಲಕ್ಷ, 2001-02ರಲ್ಲಿ 31.20 ಲಕ್ಷ, 2002-03ರಲ್ಲಿ 32.14 ಲಕ್ಷ ರೂ.ಗಳಾಗಿರುತ್ತದೆ.

ಬೆಂಗಳೂರಿನ ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವುದು

2028(1910) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಅದರ ಬೋಧಕ ಆಸ್ಪತ್ರೆಗಳಿಗೆ ಸರ್ಕಾರ ಪ್ರತಿ ವರ್ಷ ಖರ್ಚು ಮಾಡುವ ಹಣವೆಷ್ಟು;

ಆ) ಸರ್ಕಾರ ಈಗಾಗಲೇ ಬಳ್ಳಾರಿ ಹಾಗೂ ಹುಬ್ಬಳ್ಳಿಯ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಿದೆಯೇ;

ಇ) ಹಾಗಿದ್ದಲ್ಲಿ, ಬೆಂಗಳೂರಿನ ವೈದ್ಯಕೀಯ ಮಹಾವಿದ್ಯಾಲಯವನ್ನೂ ಸಹ ರೋಗಿಗಳಿಗೆ ತ್ವರಿತ ಸೇವೆ ಒದಗಿಸುವ ದೃಷ್ಟಿಯಿಂದ ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳುತ್ತದೆಯೇ?